

بسم اللهِ الرّحمٰن الرّحيم

ಹಝ್ರತ್ ಪೈಗಂಬರ್(ಸ)ರ ಪವಿತ್ರ ಮಾದರಿ – ಸಂತೃಪ್ತಿ, ಸರಳತೆ ಮತ್ತು ವಿನಮ್ರತೆಯ ಬೆಳಕಿನಲ್ಲಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**(ಅಯ್ಯದಹುಲ್ಲಾಹ್), ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **16–10–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)

"ನೀನು ಹೇಳು, ಈ ಧರ್ಮಪ್ರಚಾರಕ್ಕಾಗಿ ಅಥವಾ ಕಾರ್ಯಕ್ಕಾಗಿ ನಾನು ನಿಮ್ಮಿಂದ ಯಾವುದೇ ಪ್ರತಿಫಲವನ್ನು ಕೇಳುವುದಿಲ್ಲ ಮತ್ತು ನಾನು ಸೋಗುಗಾರರಲ್ಲಿ ಸೇರಿದವನೂ ಅಲ್ಲ." ಈ ಆಯತ್‌ನಲ್ಲಿ ಅಲ್ಲಾಹನು ಹಝ್ರತ್ ಪೈಗಂಬರ್(ಸ)ರ ಮೂಲಕ ಜನರಿಗಾಗಿ ಹೀಗೆ ಘೋಷಣೆ ಮಾಡಿಸುತ್ತಿದ್ದಾನೆ: ನಾನು ನಿಮಗೆ ತಲುಪಿಸುತ್ತಿರುವ ದೇವನ ಸಂದೇಶ ಮತ್ತು ತೋರಿಸುತ್ತಿರುವ ಒಳಿತಿನ ಮಾರ್ಗಗಳು ಕೇವಲ ನಿಮ್ಮ ಇಹಲೋಕ ಮತ್ತು ಪರಲೋಕವನ್ನು ಉತ್ತಮಪಡಿಸಲು ಹಾಗೂ ನಿಮ್ಮ ಪ್ರಯೋಜನಕ್ಕಾಗಿಯೇ ಆಗಿವೆ. ಈ ಕಾರ್ಯಕ್ಕಾಗಿ ನನಗೆ ನಿಮ್ಮಿಂದ ಏನೂ ಬೇಡ ಮತ್ತು ನನಗೆ ಅದರ ಅಗತ್ಯವೂ ಇಲ್ಲ. ನನಗೆ ಇದರ ಪ್ರತಿಫಲ ಎಲ್ಲ ಖಜಾನೆಗಳ ಒಡೆಯನಿಂದಲೇ ಲಭಿಸುತ್ತಿದೆ.

ನಬಿ(ಸ)ರ ಜೀವನವು ಈ ಅನಗತ್ಯ ಔಪಚಾರಿಕತೆಗಳಿಂದ ಮುಕ್ತವಾಗಿತ್ತು. ಜೀವನವು ಔಪಚಾರಿಕತೆ ಮತ್ತು ಕೃತಕತೆಯಿಂದ ಮುಕ್ತವಾಗಿದ್ದರೆ, ಲೌಕಿಕ ಆಸೆಗಳೇ ಇರುವುದಿಲ್ಲ ಮತ್ತು ಅಗತ್ಯ ವಸ್ತುಗಳನ್ನು ಅಲ್ಲಾಹನೇ ಒದಗಿಸುತ್ತಾನೆ. ತಮ್ಮನ್ನು ಸರಳವಾಗಿಟ್ಟುಕೊಳ್ಳಲು ಮತ್ತು ಕೃತಕತೆಗಳಿಂದ ಮುಕ್ತವಾಗಿರಲು ಇವು ಸತ್ಯವಿಶ್ವಾಸಿಗಳಿಗೂ ಇರುವ ಉಪದೇಶಗಳಾಗಿವೆ. ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ವರದಿ ಮಾಡುತ್ತಾರೆ, ನಬಿ(ಸ) ಹೀಗೆ ಹೇಳಿದರು: ವಾಸಿಸಲು ಒಂದು ಮನೆ, ನಗ್ನತೆಯನ್ನು ಮುಚ್ಚಲು ಸಾಲುವಷ್ಟು ಬಟ್ಟೆ, ಒಣ ರೊಟ್ಟಿ ಮತ್ತು ನೀರಿನ ಹೊರತಾಗಿ ಮನುಷ್ಯನಿಗೆ ಯಾವುದೇ ಹಕ್ಕಿಲ್ಲ. ವಾಸ್ತವದಲ್ಲಿ 'ನನಗೆ ಯಾವುದೇ ಕೃತಕತೆಯ ಅಗತ್ಯವಿಲ್ಲ' ಎಂಬುದಾಗಿ ನಬಿ(ಸ) ತಮ್ಮ ಸ್ಥಿತಿ ಮತ್ತು ತಮ್ಮ ಜೀವನದ ಚಿತ್ರಣವನ್ನು ನೀಡುತ್ತಿದ್ದಾರೆ. 'ಬಡವರನ್ನು ಪ್ರೀತಿಸಿ ಎಂದು ನಬಿ(ಸ) ಹೇಳುತ್ತಿದ್ದರು. ಇದೇ ಕಾರಣಕ್ಕಾಗಿ ನಬಿ(ಸ) ಮಾಡುತ್ತಿದ್ದ ದುಆದ ಬಗ್ಗೆ ಹಝ್ರತ್ ಅಬೂ ಸಯೀದ್ ಖುದ್ರಿ(ರ) ಹೀಗೆ ವರದಿ ಮಾಡಿದ್ದಾರೆ: ರಸೂಲುಲ್ಲಾಹ್(ಸ) ಹೀಗೆ ದುಆ ಮಾಡುವುದನ್ನು ನಾನು ಕೇಳಿದ್ದೇನೆ: 'ಹೇ ಅಲ್ಲಾಹ್, ನನ್ನನ್ನು ಬಡವನಾಗಿ ಜೀವಂತವಾಗಿರಿಸು ಮತ್ತು ಬಡವನಾಗಿಯೇ ನನಗೆ ಮರಣವನ್ನು ನೀಡು ಹಾಗೂ ನನ್ನನ್ನು ಬಡವರ ಗುಂಪಿನಲ್ಲೇ ಎಬ್ಬಿಸು'."

ಹಝ್ರತ್ ಅಬೂ ಉಮಾಮಾ(ರ) ವಿವರಿಸುತ್ತಾರೆ: ಸಹಾಬಿಯರು ನಬಿ(ಸ)ರ ಬಳಿ ಲೋಕದ ಬಗ್ಗೆ ಪ್ರಸ್ತಾಪಿಸಿದಾಗ, ನಬಿ(ಸ) ಎರಡು ಬಾರಿ ಅವರನ್ನು ಉದ್ದೇಶಿಸಿ ಹೀಗೆ ಗಮನ ಸೆಳೆದರು: "ನೀವು ಕೇಳಿಸಿಕೊಳ್ಳುವುದಿಲ್ಲವೇ? ಖಂಡಿತವಾಗಿಯೂ ಸರಳತೆಯು ಈಮಾನಿನ ಭಾಗವಾಗಿದೆ, ಖಂಡಿತವಾಗಿಯೂ ಸರಳತೆಯು ಸತ್ಯವಿಶ್ವಾಸದ ಭಾಗವಾಗಿದೆ." ಹಝ್ರತ್ ಇಮ್ರಾನ್ ಬಿನ್ ಹುಸೈನ್(ರ) ವಿವರಿಸುತ್ತಾರೆ, ರಸೂಲುಲ್ಲಾಹ್(ಸ) ಹೀಗೆ ಹೇಳಿದರು: "ಸತ್ಯವಿಶ್ವಾಸಿಯಾಗಿರುವ, ಬಡವನಾಗಿರುವ, ಯಾಚಿಸುವುದರಿಂದ ದೂರವಿರುವ ಮತ್ತು ಕುಟುಂಬಸ್ಥನಾಗಿರುವ ತನ್ನ ದಾಸನನ್ನು ಅಲ್ಲಾಹನು ಖಂಡಿತವಾಗಿಯೂ ಪ್ರೀತಿಸುತ್ತಾನೆ." ಸರಳತೆ ಮತ್ತು ಇದ್ದುದರಲ್ಲಿ ತೃಪ್ತಿಯನ್ನು ಹೊಂದಿದ್ದರೆ ಮಾತ್ರ ಮನುಷ್ಯನಿಗೆ ಯಾಚಿಸುವುದರಿಂದ ದೂರವಿರಲು ಸಾಧ್ಯ. ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ವಿವರಿಸುತ್ತಾರೆ: ಬಡ ಮುಹಾಜಿರರು ರಸೂಲುಲ್ಲಾಹ್(ಸ)ರ ಬಳಿ ಶ್ರೀಮಂತರ ಶ್ರೇಷ್ಠತೆಯ ಕುರಿತು ದೂರು ನೀಡಿದಾಗ, ನಬಿ(ಸ) ಹೀಗೆ ಸುವಾರ್ತೆ ನೀಡಿದರು: "ಬಡ ಸತ್ಯವಿಶ್ವಾಸಿಗಳು ಶ್ರೀಮಂತರಿಗಿಂತ ಅರ್ಧ ದಿನ, ಅಂದರೆ ಐನೂರು ವರ್ಷಗಳ ಮುನ್ನವೇ ಸ್ವರ್ಗವನ್ನು ಪ್ರವೇಶಿಸುವರು." ಅನಂತರ ವರದಿಗಾರ ಈ ಆಯತನ್ನು ಓದಿದರು: "ಖಂಡಿತವಾಗಿಯೂ ನಿನ್ನ ಪ್ರಭುವಿನ ಬಳಿ ಒಂದು ದಿನವು, ನೀವು ಲೆಕ್ಕಹಾಕುವ ಒಂದು ಸಾವಿರ ವರ್ಷಗಳಿಗೆ ಸಮಾನವಾಗಿದೆ", ಹಾಗಾದರೆ ಅರ್ಧ ದಿನವೆಂದರೆ ಐನೂರು ವರ್ಷಗಳು ಎಂದರ್ಥ.

(ಹುಝೂರ್ ಹೇಳುತ್ತಾರೆ:) ಇದರ ಅರ್ಥ, ಮನುಷ್ಯನು ಕೈಕಟ್ಟಿ ಕುಳಿತುಕೊಂಡು ಕೆಲಸ ಮಾಡದಿರಬೇಕು ಎಂದಲ್ಲ; ಬದಲಾಗಿ ಸಂಪೂರ್ಣ ಗಮನ ಮತ್ತು ಶ್ರಮದಿಂದ ಕೆಲಸ ಮಾಡುವುದು, ಸರಳ ಜೀವನ ನಡೆಸುವುದು, ಇದ್ದುದರಲ್ಲಿ ತೃಪ್ತಿಯಿಂದ ಇರುವುದು ಮತ್ತು ಕೃತಜ್ಞತೆ ಸಲ್ಲಿಸುವುದು ಸತ್ಯವಿಶ್ವಾಸಿಯ ಲಕ್ಷಣವಾಗಿದೆ, ಇದು ಈಮಾನನ್ನು ಹೆಚ್ಚಿಸುತ್ತದೆ.

ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ವರದಿ ಮಾಡುತ್ತಾರೆ, ರಸೂಲುಲ್ಲಾಹ್(ಸ) ನನ್ನ ಭುಜವನ್ನು ಹಿಡಿದು ಹೀಗೆ ಹೇಳಿದರು: "ನೀನು ಲೋಕದಲ್ಲಿ ಪರದೇಶಿ ಅಥವಾ ದಾರಿಯಲ್ಲಿ ಸಾಗುವ ಪ್ರಯಾಣಿಕನಂತೆ ಜೀವಿಸು." ಇಬ್ನು ಉಮರ್(ರ) ಹೇಳುತ್ತಿದ್ದರು: "ಸಂಜೆಯಾದರೆ ಬೆಳಗಿಗಾಗಿ ಕಾಯಬೇಡ ಮತ್ತು ಬೆಳಗಾದರೆ ಸಂಜೆಗಾಗಿ ಕಾಯಬೇಡ, ನೀನು ಆರೋಗ್ಯದಲ್ಲಿ ಇರುವಾಗ ಅನಾರೋಗ್ಯಕ್ಕಾಗಿ ಹಾಗೂ ಜೀವಂತವಾಗಿ ಇರುವಾಗ ಮರಣಕ್ಕಾಗಿ ಸ್ವಲ್ಪ ಸಿದ್ಧತೆ ಮಾಡಿಕೊ."

ಹಝ್ರತ್ ಉಮರ್(ರ)ರಿಂದ ವರದಿಯಾಗಿದೆ, ಅವರು ಭಾಷಣಪೀಠದ ಮೇಲೆ ನಿಂತು ಹೇಳಿದರು, ನಾನು ನಬಿ(ಸ) ಹೀಗೆ ಹೇಳುತ್ತಿರುವುದನ್ನು ಕೇಳಿದ್ದೇನೆ: "ಕ್ರೈಸ್ತರು ಈಸಾ ಮಸೀಹರನ್ನು ಹೊಗಳುವಲ್ಲಿ ಅತಿರೇಕ ತೋರಿದಂತೆ ನನ್ನನ್ನು ಹೊಗಳುವಲ್ಲಿ ನೀವು ಅತಿರೇಕ ತೋರಬೇಡಿರಿ. ನಾನು ಕೇವಲ ಅಲ್ಲಾಹನ ದಾಸನಾಗಿದ್ದೇನೆ, ನೀವು ಕೇವಲ ಅವನ ದಾಸ ಮತ್ತು ಅವನ ರಸೂಲ್ ಎಂದಷ್ಟೇ ಹೇಳಿರಿ." ಮುತರಿಫ್ ತಮ್ಮ ತಂದೆಯಿಂದ ವಿವರಿಸಿದ್ದಾರೆ: ಬನೂ ಆಮಿರ್‌ನ ನಿಯೋಗದಲ್ಲಿ ನಾವು ನಬಿ(ಸ)ರೊಡನೆ 'ನೀವು ನಮ್ಮ ನಾಯಕ' ಎಂದು ಹೇಳಿದಾಗ, ನಬಿ(ಸ) ಹೇಳಿದರು: "ನಾಯಕನಂತೂ ಅಲ್ಲಾಹನಾಗಿದ್ದಾನೆ." ನಂತರ ನಾವು ನಬಿ(ಸ)ರೊಡನೆ 'ನೀವು ಕೃಪೆಯಲ್ಲಿ ಅತ್ಯಂತ ಶ್ರೇಷ್ಠರು ಮತ್ತು ಉಪಕಾರದಲ್ಲಿ ಅತಿ ದೊಡ್ಡವರು' ಎಂದು ಹೇಳಿದಾಗ, ನಬಿ(ಸ) ಹೇಳಿದರು: "ನಿಮ್ಮ ಮಾತನ್ನಷ್ಟೇ ಹೇಳಿ, ಇಂತಹ ವ್ಯರ್ಥವಾದ ಹೊಗಳಿಕೆಗಳನ್ನು ಮಾಡಬೇಡಿ, ಶೈತಾನನು ನಿಮ್ಮನ್ನು ದೇವಭಯ ಇಲ್ಲದವರನ್ನಾಗಿ ಮಾಡದಿರಲಿ." ಹಝ್ರತ್ ರಬೀಅ್ ಬಿಂತ್ ಮುಅವ್ವಿಝ್(ರ) ವಿವರಿಸುತ್ತಾರೆ: ಅವರ ಮದುವೆಯಲ್ಲಿ ಹುಡುಗಿಯರು ಡೋಲು ಬಾರಿಸುತ್ತಾ ಬದ್ರ್ ಯುದ್ಧದ ಹುತಾತ್ಮರನ್ನು ಹೊಗಳುತ್ತಿದ್ದರು, ಅವರಲ್ಲೊಬ್ಬ ಹುಡುಗಿ ಹೀಗೆ ಹೇಳಿದಳು: "ನಮ್ಮಲ್ಲಿ ನಾಳೆ ಏನಾಗುತ್ತದೆ ಎಂದು ತಿಳಿಯುವಂತಹ ಓರ್ವ ಪ್ರವಾದಿ ಇದ್ದಾರೆ". ನಬಿ(ಸ) ಹೀಗೆ ಹೇಳಿದರು: "ಅದನ್ನು ಬಿಟ್ಟುಬಿಡು ಮತ್ತು ಮೊದಲು ಏನು ಹಾಡುತ್ತಿದ್ದೆಯೋ ಅದನ್ನೇ ಹಾಡು." ಎಲ್ಲಿ ಅನಗತ್ಯ ಹೊಗಳಿಕೆ ಮತ್ತು ಶಿರ್ಕಿನ ಮಾತು ಬಂತೋ ಅಲ್ಲಿ ನಬಿ(ಸ) ತಕ್ಷಣವೇ ತಡೆಯುತ್ತಿದ್ದರು.

ನಬಿ(ಸ)ರ ಮನೆ ಮತ್ತು ವಾಸಸ್ಥಳದ ಸರಳತೆಯ ಕುರಿತು ಪ್ರಸ್ತಾಪವಿದೆ. ಹಿಜ್ರತ್‌ನ ನಂತರ ಮಸ್ಜಿದ್ ನಬವಿಯ ಪಕ್ಕದಲ್ಲಿ ಹತ್ತು-ಹದಿನೈದು ಅಡಿಗಳ ಸಣ್ಣ ಕೊಠಡಿಯನ್ನು ನಿರ್ಮಿಸಲಾಯಿತು, ಅದರ ಬಾಗಿಲು ಮಸೀದಿಗೆ ತೆರೆದುಕೊಳ್ಳುತ್ತಿತ್ತು ಮತ್ತು ಅಲ್ಲಿಂದಲೇ ನಬಿ(ಸ) ನಮಾಝ್‌ಗೆ ಹೋಗುತ್ತಿದ್ದರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) 'ಸೀರತ್ ಖಾತಮನ್ನಬಿಯ್ಯೀನ್' ಬರೆದಿರುವ ಮತ್ತು ಚರಿತ್ರೆಯಲ್ಲಿ ಇರುವ ವಿವರಣೆ ಏನೆಂದರೆ, ಹಝ್ರತ್ ಹಾರಿಸಾ ಬಿನ್ ನುಅ್ಮಾನ್(ರ)ರಿಗೆ ಮಸೀದಿಯ ಸುತ್ತಮುತ್ತ ಅನೇಕ ಮನೆಗಳಿದ್ದವು. ರಸೂಲುಲ್ಲಾಹ್(ಸ) ವಿವಾಹವಾಗಿ ಹೊಸ ಪತ್ನಿ ಬಂದಾಗಲೆಲ್ಲಾ, ಹಾರಿಸಾ ತಮ್ಮ ಒಂದು ಮನೆಯನ್ನು ನೀಡುತ್ತಿದ್ದರು, ಎಷ್ಟರ ಮಟ್ಟಿಗೆಂದರೆ ಹಾರಿಸಾರ ಎಲ್ಲ ಮನೆಗಳು ರಸೂಲುಲ್ಲಾಹ್(ಸ)ರದ್ದಾಗಿ ಬಿಟ್ಟವು. ಒಟ್ಟು ಒಂಬತ್ತು ಮನೆಗಳಿದ್ದವು, ಅವುಗಳಲ್ಲಿ ನಬಿ(ಸ) ತಮ್ಮ ಕೊನೆಯ ಹತ್ತು ವರ್ಷಗಳನ್ನು ಕಳೆದರು. ಹಝ್ರತ್ ಆಯಿಶ(ರ)ರ ಮನೆಯಲ್ಲಿ ನಬಿ(ಸ)ರನ್ನು ದಫನ್ ಮಾಡಲಾಯಿತು. ಈ ಮನೆಗಳು ಹಸಿ ಇಟ್ಟಿಗೆಗಳು, ಮಣ್ಣು ಮತ್ತು ಖರ್ಜೂರದ ಗರಿಗಳಿಂದ ಮಾಡಲ್ಪಟ್ಟಿದ್ದವು, ಅವುಗಳ ಮೇಲೆ ಕೂದಲಿನ ಕಂಬಳಿಗಳನ್ನು ಹಾಕಲಾಗಿತ್ತು. ಪ್ರತಿಯೊಂದು ಕೋಣೆಯ ಉದ್ದ ಸುಮಾರು ಐದು ಮೀಟರ್ ಮತ್ತು ಅಗಲ ನಾಲ್ಕು ಮೀಟರ್ ಆಗಿತ್ತು, ಅಂಗಳದ ಅಗಲ ಸುಮಾರು ಮೂರೂವರೆ ಮೀಟರ್ ಇತ್ತು. ಛಾವಣಿಗಳು ಕೈಯಿಂದ ಮುಟ್ಟಲು ಸಾಧ್ಯವಷ್ಟು ಎತ್ತರದಲ್ಲಿ ಇತ್ತು. ಅತಾ ವಿವರಿಸುತ್ತಾರೆ, ಸಯೀದ್ ಬಿನ್ ಮುಸಯ್ಯಬ್ ಕೊಠಡಿಗಳನ್ನು ಕೆಡವಿದ ದಿನ ಹೀಗೆ ಹೇಳಿದರು: "ದೇವನಾಣೆ! ನಬಿ(ಸ) ಎಷ್ಟು ಕನಿಷ್ಠ ಸೌಲಭ್ಯಗಳಲ್ಲಿ ತೃಪ್ತರಾಗಿದ್ದರು ಎಂಬುದನ್ನು ಜನರು ನೋಡಲಿಕ್ಕಾಗಿ ಈ ಕೊಠಡಿಗಳನ್ನು ಹಾಗೆಯೇ ಬಿಡಬೇಕೆಂದು ನಾನು ಬಯಸಿದ್ದೆ." ಹಝ್ರತ್ ಅಬೂ ಉಮಾಮಾ(ರ) ಸಹ ಹೀಗೆ ಹೇಳಿದ್ದರು: "ಜನರು ಕಟ್ಟಡಗಳನ್ನು ನಿರ್ಮಿಸುವುದನ್ನು ಕಡಿಮೆ ಮಾಡಲಿಕ್ಕಾಗಿ ಈ ಕೊಠಡಿಗಳನ್ನು ಹಾಗೆಯೇ ಬಿಟ್ಟಿದ್ದರೆ ಎಷ್ಟು ಚೆನ್ನಾಗಿತ್ತು."

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸಾವಿರಾರು ಅಪಾಯಗಳು ಎದುರಾದರೂ, ಹಝ್ರತ್ ಪೈಗಂಬರ್(ಸ) ತಮ್ಮ ಪ್ರವಾದಿತ್ವದ ವಾದದಲ್ಲಿ ಮೊದಲಿನಿಂದ ಕೊನೆಯವರೆಗೂ ಎಷ್ಟೊಂದು ದೃಢತೆ ಮತ್ತು ಸ್ಥಿರತೆಯಿಂದ ಇದ್ದರು ಎಂಬುದನ್ನು ಯೋಚಿಸಬೇಕು. ಯಶಸ್ಸಿನ ನಿರೀಕ್ಷೆಯನ್ನು ಸಂಪೂರ್ಣವಾಗಿ ನಿರಾಶೆಗೊಳಿಸುತ್ತಿದ್ದ ಮತ್ತು ದಿನೇ ದಿನೇ ಹೆಚ್ಚಾಗುತ್ತಿದ್ದ ಕಷ್ಟಗಳನ್ನು ಮತ್ತು ನೋವುಗಳನ್ನು ನಬಿ(ಸ) ವರ್ಷಗಳ ಕಾಲ ಅನುಭವಿಸಿದರು; ಅವುಗಳನ್ನು ಸಹಿಸಿಕೊಳ್ಳುವುದರಿಂದ ಯಾವುದೇ ಲೌಕಿಕ ಗುರಿ ಸಾಧನೆಯಾಗುತ್ತದೆ ಎಂದು ಊಹಿಸಲು ಸಾಧ್ಯವಿರಲಿಲ್ಲ... ತದನಂತರ ಬಹುಕಾಲದ ಬಳಿಕ ಇಸ್ಲಾಮಿಗೆ ವಿಜಯ ಲಭಿಸಿದಾಗ, ಆ ಸಂಪತ್ತು ಮತ್ತು ಯಶಸ್ಸಿನ ದಿನಗಳಲ್ಲೂ ಯಾವುದೇ ಖಜಾನೆಯನ್ನು ಕೂಡಿಡಲಿಲ್ಲ, ಯಾವುದೇ ಕಟ್ಟಡವನ್ನು ನಿರ್ಮಿಸಲಿಲ್ಲ... ಬದಲಾಗಿ ಏನು ಬಂದರೂ ಅದೆಲ್ಲವೂ ಅನಾಥರು, ಬಡವರು, ವಿಧವೆಯರು ಮತ್ತು ಸಾಲಗಾರರ ಪೋಷಣೆಗಾಗಿ ಖರ್ಚಾಗುತ್ತಿತ್ತು. ಎಂದಿಗೂ ಒಂದು ಹೊತ್ತು ಕೂಡ ಹೊಟ್ಟೆತುಂಬಾ ಊಟ ಮಾಡಲಿಲ್ಲ.

ಹಝ್ರತ್ ಆಯಿಷಾ(ರ)ರ ಮನೆಯಲ್ಲಿ ನಬಿ(ಸ) ಹಾಸಿಗೆಯು ಖರ್ಜೂರದ ನಾರು ತುಂಬಿದ್ದ ಚರ್ಮದ್ದಾಗಿತ್ತು. ಹಝ್ರತ್ ಹಫ್ಸಾ(ರ)ರ ಮನೆಯಲ್ಲಿ ಉಣ್ಣೆಯ ಕಂಬಳಿಯಿತ್ತು, ಅದನ್ನು ಅವರು ಎರಡು ಮಡಿಕೆ ಮಾಡಿ ಇಡುತ್ತಿದ್ದರು. ಒಂದು ರಾತ್ರಿ ನಾಲ್ಕು ಮಡಿಕೆ ಮಾಡಿದಾಗ, ನಬಿ(ಸ) ಬೆಳಿಗ್ಗೆ ಹೀಗೆ ಹೇಳಿದರು: "ಅದನ್ನು ಮೊದಲಿನಂತೆಯೇ ಇಡು, ಏಕೆಂದರೆ ಅದರ ಮೃದುತ್ವವು ನನ್ನ ರಾತ್ರಿಯ ನಮಾಝ್‌ಗೆ ಅಡ್ಡಿಯಾಗುತ್ತಿದೆ." ಇದು ನಿದ್ರೆಯ ಬಗ್ಗೆ ಹೇಳಿದ್ದಲ್ಲ, ಬದಲಾಗಿ ಹಾಸಿಗೆಯ ಮೇಲೆ ನಿಂತು ನಮಾಝ್ ಮಾಡುವಾಗ ಸಮತೋಲನ ಮತ್ತು ಆರಾಧನೆಯ ಅನುಭೂತಿ ಸಿಗುತ್ತಿರಲಿಲ್ಲ ಎಂದಾಗಿತ್ತು. ಹಝ್ರತ್ ಆಯಿಷಾ(ರ) ವಿವರಿಸುತ್ತಾರೆ: ಮನೆಗಳಲ್ಲಿ ದೀಪಗಳಿರಲಿಲ್ಲ, ನಬಿ(ಸ) ಸಜ್ದ ಮಾಡುವಾಗ ನನ್ನನ್ನು ಕೈಯಿಂದ ಒತ್ತುತ್ತಿದ್ದರು ಮತ್ತು ನಾನು ಕಾಲುಗಳನ್ನು ಮಡಚಿಕೊಳ್ಳುತ್ತಿದ್ದೆ, ನಬಿ(ಸ) ನಿಲ್ಲುವಾಗ ನಾನು ಕಾಲುಗಳನ್ನು ಚಾಚುತ್ತಿದ್ದೆ. ಹಝ್ರತ್ ಅಬ್ದುಲ್ಲಾಹ್(ರ) ಮತ್ತು ಹಝ್ರತ್ ಅಬ್ದುಲ್ಲಾ ಬಿನ್ ಮಸೂದ್(ರ) ವಿವರಿಸಿದ್ದಾರೆ: ನಬಿ(ಸ) ಚಾಪೆಯ ಮೇಲೆ ಮಲಗಿದ್ದರು, ಅದು ನಬಿ(ಸ) ದೇಹದಲ್ಲಿ ಗುರುತು ಮೂಡಿಸಿತ್ತು, ಇದನ್ನು ಕಂಡು ಅಬ್ದುಲ್ಲಾ ಬಿನ್ ಮಸೂದ್(ರ) ಅಳಲಾರಂಭಿಸಿ ಹೀಗೆ ಹೇಳಿದರು: "ಇರಾನ್ ಮತ್ತು ರೋಮಿನ ಅರಸರು ರೇಷ್ಮೆಯ ಮೇಲೆ ನಡೆಯುತ್ತಾರೆ". ನಬಿ(ಸ) ಹೇಳಿದರು: "ಅಳಬೇಡ, ಅವರಿಗಾಗಿ ಲೋಕವಿದೆ ಮತ್ತು ನಮಗಾಗಿ ಪರಲೋಕವಿದೆ, ನಾನು ಮತ್ತು ಲೋಕದ ಉದಾಹರಣೆಯು ಮರದ ಕೆಳಗೆ ತಂಗಿ ನಂತರ ಹೊರಟುಹೋಗುವ ಓರ್ವ ಕುದುರೆ ಸವಾರನಂತಿದೆ." ಹಝ್ರತ್ ಉಮರ್(ರ) ಮಾಳಿಗೆಯ ಕೋಣೆಯಲ್ಲಿ ನಬಿ(ಸ) ಚಾಪೆಯ ಮೇಲೆ ಮಲಗಿರುವುದನ್ನು ಕಂಡರು, ಅದರ ಗುರುತುಗಳು ನಬಿ(ಸ)ರ ದೇಹದಲ್ಲಿದ್ದವು ಮತ್ತು ತಲೆಯ ಕೆಳಗೆ ಖರ್ಜೂರದ ನಾರಿನ ದಿಂಬಿತ್ತು, ಅವರು ಅಳಲಾರಂಭಿಸಿದಾಗ ನಬಿ(ಸ) ಇದೇ ಮಾತನ್ನು ಹೇಳಿದರು: "ಅವರಿಗಾಗಿ ಲೋಕವಿರಲಿ ಮತ್ತು ನಮಗಾಗಿ ಪರಲೋಕವಿರಲಿ ಎಂಬ ಈ ವಿಷಯದಿಂದ ನೀನು ಸಂತೋಷಪಡುವುದಿಲ್ಲವೇ?" ಹಝ್ರತ್ ಮಸೀಹ್ ಮೌಊದ್(ಅ) ಸಹ ಈ ಘಟನೆಯನ್ನು ಪ್ರಸ್ತಾಪಿಸುತ್ತಾ, ನಬಿ(ಸ) ಹೀಗೆ ಹೇಳಿದರು ಎಂದು ತಿಳಿಸಿದ್ದಾರೆ: "ನಾನಂತೂ, ಒಂಟೆಯ ಮೇಲೆ ಸವಾರಿ ಮಾಡುತ್ತಾ ಬಿಸಿಲಿನಲ್ಲಿ ಮರದ ನೆರಳಿನಲ್ಲಿ ವಿಶ್ರಮಿಸಿ ಬೆವರು ಒಣಗಿದ ತಕ್ಷಣವೇ ಹೊರಡುವಂತಹ ಓರ್ವ ಪ್ರಯಾಣಿಕನಂತಿದ್ದೇನೆ."

ಹಝ್ರತ್ ಮುಸ್ಲಿಹ್ ಮೌಊದ್(ರ) ನಬಿ(ಸ)ರ ಜೀವನ ಚರಿತ್ರೆಯ ಬಗ್ಗೆ ಬರೆದಿರುವುದರ ಸಾರಾಂಶ ಹೀಗಿದೆ: ನಬಿ(ಸ) ಸಂಪತ್ತನ್ನು ಹಂಚುವಲ್ಲಿ ಎಷ್ಟೊಂದು ಎಚ್ಚರಿಕೆ ವಹಿಸುತ್ತಿದ್ದರೆಂದರೆ, ಇನ್ನು ಮುಂದೆ ಆಡಳಿತಗಾರರು ಜನರ ಸಂಪತ್ತನ್ನು ತಮಗಾಗಿ ಕಾನೂನುಬದ್ಧವೆಂದು ಪರಿಗಣಿಸದಿರಲಿ ಎಂಬ ಕಾರಣಕ್ಕಾಗಿ ಹಝ್ರತ್ ಫಾತಿಮಾ(ರ) ಮತ್ತು ಹಝ್ರತ್ ಅಲಿ(ರ)ರಿಗೆ ಹಕ್ಕಿದ್ದರೂ ಸೇವಕರನ್ನು ನೀಡಲಿಲ್ಲ; ಹಝ್ರತ್ ಅಲಿ(ರ)ರ ಪ್ರಕಾರ, ಹಝ್ರತ್ ಫಾತಿಮಾ(ರ)ರಿಗೆ ತವರು ಮನೆಯಿಂದ ಕೇವಲ ಒಂದು ರೇಷ್ಮೆಯ ಚಾದರ, ಖರ್ಜೂರದ ನಾರು ತುಂಬಿದ್ದ ಚರ್ಮದ ಹಾಸಿಗೆ, ಹಿಟ್ಟು ಬೀಸುವ ಎರಡು ಕಲ್ಲುಗಳು, ನೀರಿನ ಚೀಲ ಮತ್ತು ಎರಡು ಮಡಿಕೆಗಳು ಉಡುಗೊರೆಯಾಗಿ ಲಭಿಸಿದ್ದುವು. ಹಝ್ರತ್ ಆಯಿಶ(ರ) ಮತ್ತು ಹಝ್ರತ್ ಉಮ್ಮೆ ಸಲ್ಮಾ(ರ) ಮಣ್ಣಿನಿಂದ ಕೋಣೆಯನ್ನು ಸಾರಿಸಿದರು, ಖರ್ಜೂರದ ನಾರಿನಿಂದ ಎರಡು ದಿಂಬುಗಳನ್ನು ಮಾಡಿದರು, ಖರ್ಜೂರ, ದ್ರಾಕ್ಷಿ ಮತ್ತು ಸಿಹಿ ನೀರನ್ನು ಕುಡಿಸಿದರು. ಅವರು ಹೀಗೆ ಹೇಳುತ್ತಿದ್ದರು: "ನಾವು ಹಝ್ರತ್ ಫಾತಿಮಾರ ವಿವಾಹಕ್ಕಿಂತ ಉತ್ತಮವಾದ ಮತ್ತು ಸರಳವಾದ ವಿವಾಹವನ್ನು ನೋಡಿಲ್ಲ".

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಬಿ(ಸ) ತಮ್ಮ ಕೊನೆಯ ವಯಸ್ಸಿನಲ್ಲಿ ಅರಸನಂತೆ ಇದ್ದರು, ಆದರೆ ಯಾವುದೇ ಲೌಕಿಕ ಲಾಭವನ್ನು ಪಡೆಯಲಿಲ್ಲ, ಯಾವುದೇ ಆಸ್ತಿ–ಪಾಸ್ತಿಗಳನ್ನು ತಮ್ಮದೆಂದು ಘೋಷಿಸಲಿಲ್ಲ ಅಥವಾ ಬಳುವಳಿಯಾಗಿ ಹಸ್ತಾಂತರಿಸಲಿಲ್ಲ. ಮರಣದ ಸಮಯದಲ್ಲೂ ನಬಿ(ಸ)ರ ವಸ್ತುಗಳನ್ನು ಮನೆಯ ಖರ್ಚಿಗಾಗಿ ಅಡಮಾನ ಇಡಲಾಗಿದ್ದುವು. ಹಝ್ರತ್ ಫಾತಿಮಾ(ರ) ಯುದ್ಧ ಸಂಪತ್ತಿನಿಂದ ದಾಸಿಯನ್ನು ಕೇಳಿದಾಗ, ನಬಿ(ಸ) ಹೇಳಿದರು: "ಈ ಸಂಪತ್ತು ನನ್ನದಲ್ಲ ಅಲ್ಲಾಹನದ್ದು ಆಗಿದೆ, ನೀನು ದೇವಸ್ಮರಣೆ ಮಾಡು ಮತ್ತು ದಾಸಿಯ ಆಲೋಚನೆಯನ್ನು ಬಿಟ್ಟುಬಿಡು." ಹಝ್ರತ್ ಆಯಿಶ(ರ) ಹೇಳಿದ್ದಾಗಿ ಅಸ್ವದ್ ವರದಿ ಮಾಡುತ್ತಾರೆ: ನಬಿ(ಸ) ಮನೆಯವರ ದಿನನಿತ್ಯದ ಕೆಲಸ–ಕಾರ್ಯಗಳಲ್ಲಿ ಸಹಾಯ ಮಾಡುತ್ತಿದ್ದರು ಮತ್ತು ನಮಾಝ್ಗಿನ ಸಮಯವಾಗುವಾಗ ನಮಾಝ್‌ಗಾಗಿ ತೆರಳುತ್ತಿದ್ದರು. ನಬಿ(ಸ) ಗೋಡೆಯನ್ನು ದುರಸ್ತಿ ಮಾಡುವುದನ್ನು ನೋಡಿ ಹಝ್ರತ್ ಹಸ್ನಾ ಬಿನ್ ಖಾಲಿದ್ ಮತ್ತು ಹಝ್ರತ್ ಸವಾದ್ ಬಿನ್ ಖಾಲಿದ್(ರ) ನೆರವು ನೀಡಿದರು. ಹಝ್ರತ್ ಆಯಿಶಾ(ರ) ವಿವರಿಸುತ್ತಾರೆ: ನಬಿ(ಸ) ಇತರ ಮನುಷ್ಯರಂತೆಯೇ ಒಬ್ಬ ಮನುಷ್ಯರಾಗಿದ್ದರು, ತಮ್ಮ ಬಟ್ಟೆಗಳನ್ನು ತಾವೇ ಸ್ವಚ್ಛಗೊಳಿಸುತ್ತಿದ್ದರು, ಮೇಕೆಯ ಹಾಲು ಕರೆಯುತ್ತಿದ್ದರು ಮತ್ತು ತಮ್ಮ ಕೆಲಸವನ್ನು ತಾವೇ ಮಾಡುತ್ತಿದ್ದರು. 'ಇವರೆಂತಹ ಪ್ರವಾದಿ, ಊಟ ಮಾಡುತ್ತಾರೆ ಮತ್ತು ಮಾರುಕಟ್ಟೆಗಳಲ್ಲಿ ತಿರುಗಾಡುತ್ತಾರೆ' ಎಂದು ಕಾಫಿರರು ಹೇಳುತ್ತಿದ್ದರು, ಆದರೆ ನಬಿ(ಸ) ವಿನಮ್ರತೆ ಮತ್ತು ಸೌಮ್ಯತೆಯನ್ನು ಅಳವಡಿಸಿಕೊಂಡರು ಮತ್ತು ಅಹಂಕಾರದಿಂದ ದೂರವಿರುವಂತೆ ಪ್ರಾಯೋಗಿಕ ಶಿಕ್ಷಣವನ್ನು ನೀಡಿದರು. ಹಝ್ರತ್ ಅಬೂಹುರೈರಾ(ರ) ವರದಿ ಮಾಡುತ್ತಾರೆ, ನಬಿ(ಸ) ಹೀಗೆ

ಹೇಳಿದರು: "ಅಲ್ಲಾಹನು ಕುರಿ–ಮೇಕೆಗಳನ್ನು ಮೇಯಿಸದ ಯಾವ ಪ್ರವಾದಿಯನ್ನೂ ಕಳುಹಿಸಿಲ್ಲ, ನಾನು ಕೂಡ ಕೆಲವು ಪೈಸೆಗಳಿಗೆ ಮಕ್ಕಾದವರ ಕುರಿ–ಮೇಕೆಗಳನ್ನು ಮೇಯಿಸಿದ್ದೇನೆ." ಸೂರಃ ಕಸಸ್‌ನ 28 ಮತ್ತು 29ನೇ ಆಯತ್‌ಗಳಲ್ಲಿ ಹಝ್ರತ್ ಮೂಸಾ(ಅ) ಸಹ ಕೂಲಿಗಾಗಿ ಕೆಲಸ ಮಾಡಿದ್ದರ ಬಗ್ಗೆ ಪ್ರಸ್ತಾಪವಿದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಬಿ(ಸ) ತಮ್ಮ ಆರಂಭಿಕ ವಯಸ್ಸನ್ನು ಅನಾಥರಾಗಿ ಮತ್ತು ನಿರ್ಗತಿಕರಾಗಿ ಕಳೆದರು, ಕುರಿ–ಮೇಕೆಗಳನ್ನು ಮೇಯಿಸಿದರು; ಪ್ರವಾದಿಗಳಲ್ಲಿ ಅಹಂಕಾರ ಮೂಡದಿರಲೆಂದು ಬಡತನದ ಪಾಲನ್ನು ಅವರೊಂದಿಗೆ ಸೇರಿಸಲಾಗಿತ್ತು. ಕಾಡಿನ ಮೂಲಕ ಹಾದುಹೋಗುವಾಗ ನಬಿ(ಸ) ಮರದ್ದೊಂದು ಸಿಹಿ ಹಣ್ಣನ್ನು ತಿನ್ನಲು ಸಹಾಬಿಯರಿಗೆ ಹೇಳುತ್ತಾ ಹೀಗೆ ತಿಳಿಸಿದರು: 'ಕುರಿ–ಮೇಕೆಗಳನ್ನು ಮೇಯಿಸುವಾಗ ನಾನು ಈ ಹಣ್ಣನ್ನು ತಿನ್ನುತ್ತಿದ್ದೆ'. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ರೋಮ್ ಮತ್ತು ಇರಾನ್ ಸರ್ಕಾರಗಳ ಪತ್ರವ್ಯವಹಾರ ಮತ್ತು ರಾಯಭಾರಿಗಳ ಆಗಮನದ ಹೊರತಾಗಿಯೂ, ನಬಿ(ಸ) ಗುಲಾಮರ ಅಥವಾ ಸೇವಕರ ಯಾವುದೇ ಪಡೆಯನ್ನು ಇಟ್ಟುಕೊಳ್ಳಲಿಲ್ಲ; ಬದಲಾಗಿ ಮನೆಯ ಕೆಲಸಗಳನ್ನು ಸ್ವತಃ ಮಾಡುತ್ತಿದ್ದರು. ಲೋಕದಲ್ಲಿ ಅರಸನಾಗಿಯೂ ಬಡತನವನ್ನು ಅಳವಡಿಸಿಕೊಳ್ಳುವುದು ಮತ್ತು ಲಕ್ಷಾಂತರ ರೂಪಾಯಿಗಳನ್ನು ಜನರಲ್ಲಿ ಹಂಚಿ ಮನೆಯ ಕೆಲಸವನ್ನು ಸ್ವತಃ ಮಾಡುವುದು ಕೇವಲ ಹಝ್ರತ್ ಪೈಗಂಬರ್(ಸ) ಮತ್ತು ಅವರ ಸೇವಕರ ವಿಶಿಷ್ಟ ಗುಣವಾಗಿದೆ.

ಖುತ್ಬದ ಕೊನೆಯಲ್ಲಿ ಹುಝೂರ್, ಪೀಡಿತ ಅಹ್ಮದಿಯರಿಗಾಗಿ ದುಆ ಮಾಡಲು ಮನವಿ ಮಾಡುತ್ತಾ ಹೀಗೆ ಹೇಳಿದರು: ಸ್ವಾರ್ಥ ಮತ್ತು ಭಯೋತ್ಪಾದಕ ಜನರು ಅಹ್ಮದಿಯರ ಮೇಲೆ ದೌರ್ಜನ್ಯ ಎಸಗುತ್ತಿದ್ದಾರೆ. ಜೊತೆಗೆ ಸರ್ಕಾರಿ ಅಧಿಕಾರಿಗಳು ಅವರಿಗೆ ಬೆಂಬಲ ನೀಡುತ್ತಿದ್ದಾರೆ ಮತ್ತು ಮುಲ್ಲಾಗಳ ಭಯದಿಂದ ನ್ಯಾಯಾಧೀಶರು ಜಾಮೀನು ನೀಡುತ್ತಿಲ್ಲ. ಅದೇ ರೀತಿ ಮಲೇಷ್ಯಾದಲ್ಲೂ ಜಮಾಅತಿನ ವಿರುದ್ಧ ಪರಿಸ್ಥಿತಿ ಹದಗೆಟ್ಟಿದೆ ಮತ್ತು ಮಸೀದಿಗಳ ಮೇಲೆ ದಾಳಿ ನಡೆಯುತ್ತಿದೆ; ಅಲ್ಲಾಹನು ಮಲೇಷ್ಯಾದ ಅಹ್ಮದಿಯರನ್ನು ತನ್ನ ಸಂರಕ್ಷಣೆಯಲ್ಲಿ ಇರಿಸಲಿ.

———————*****———————

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

Friday Sermon delivered by Hadrath Khaleefatul Masih Al Khamis(atba)

At, ***'Masjid Mubarak',*** *Islamabad, Tilford,* U.K. On 16-10-2026

Summarized by *Majlis Ansarullah Bharat*

Kannada Translation: Moulavi Inamullah for Kannada Desk, Qadian

Reviewed by: M.P Ibrahim | ***Layout:*** Basheer K.P. Manjeshwar

Published By: Kannada Isha'at Team for Nazarath Nashr-O-Isha'ath, Qadian

Email*: *khutuba.kannada@gmail.com

You can find all the Sermons archived at: www.alislam.org/friday-sermon